ಓ.ಎಸ್. ನಂ. 16/2016
ಡಿ.ಡಬ್ಲ್ಯೂ- 2

(ಇಂದು ದಿಃ 12-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವರೆದ ಮುಖ್ಯ ವಿಚಾರಣೆ **:- ಶ್ರೀ.NR** ವಕೀಲರಿಂದ **:-**

ನಾನು 1 ನೇ ಪ್ರತಿವಾದಿಯ SPA Holder ಆಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರ ವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ಈ ಹಿಂದೆ 1 ನೇ ಪ್ರತಿವಾದಿ ವಿಚಾರಣೆಗೆ ಒಳಪಟ್ಟು 16 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಾನು ಸದರಿ ದಾಖಲಾತಿಗಳನ್ನು ಅನುಮೊದಿಸುತೇನೆ. 1 ನೇಪ್ರತಿವಾದಿ ನನಗೆ ಬರೆದುಕೊಟ್ಟಿರುವ SPA ದಾಖಲಾತಿಯನ್ನು ನಿಡಿ-17 ಎಂದು, 2023 ರ ಕೊಡ್ಲಾ ಗ್ರಾಮದ ಮತದಾರರ ಯಾದಿಯ ದೃಢಿಕೃತ ನಕಲನ್ನು ನಿಡಿ-18 ಎಂದು, 3 ಕೈ ಪಹಣಿಗಳನ್ನು ನಿಡಿ-19 ರಿಂದ 21 ಎಂದು, ಮುಟೇಷನ ರಿಜಿಸ್ಟರ ಅನ್ನು ನಿಡಿ-22 ಎಂದು, 2 ಕೈ ಪಹಣಿಗಳನ್ನು ನಿಡಿ-23 ಮತ್ತು 24 ಎಂದು, ಗ್ರಾಮ ಪಂಚಾಯತಿಯವರು ನೀಡಿದ ಕರ ಬೇಡಿಕೆ ರಶೀದಿಯ Extract ಗಳನ್ನು ನಿಡಿ-25 ಮತ್ತು 26 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಇಲ್ಲ**.**

**(**ವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು**.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ**.**